ದೂರವಾಣಿ ಸಂಖ್ಯೆ: 080-22212343
ಫ್ಯಾಕ್ಸ್ ಸಂಖ್ಯೆ: 080-22278803

ಅಂತರ್ಜಾಲ: www.kptcl.com
ಇ-ಮೇಲ್ ವಿಲಾಸ: director.ahr.kptcl@gmail.com

5359

# ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ

**ನಿಗಮದ ಗುರುತಿನ ಸಂಖ್ಯೆ (ಸಿ.ಐ.ಎನ್): ಯು40109ಕೆಎ1999ಎಸ್‌ಜಿ025521**

**ಕಂಪನಿ ಅಧಿಕೃತ ಕಛೇರಿ:** ನಿಗಮ ಕಾರ್ಯಾಲಯ, ಕಾವೇರಿ ಭವನ, ಕೆ.ಜಿ.ರಸ್ತೆ, ಬೆಂಗಳೂರು 560 009.

**ಸಂಖ್ಯೆ:ಕವಿಪ್ರನಿನಿ/ಬಿ5ಎ/84276/18-19** **ದಿನಾಂಕ:** 03 SEP 2018

Admin & HRD Section
Corporate Office
HESCOM, Hubballi.

| | | |
|---|---|---|
| 1 | EE (HRD) | |
| 2 | AO (Admin) | ✓ |
| 3 | AO (Per) | |
| 4 | AO (Legal) | |
| 5 | AO (I.M.) | |
| 6 | | |

## ಸುತ್ತೋಲೆ

**ವಿಷಯ:** ಪತ್ರಗಳ/ಆದೇಶಗಳ ಪ್ರತಿಗಳನ್ನು ಅನಗತ್ಯವಾಗಿ ನಿಗಮ/ ವಿಸಕಂಗಳ ವಿವಿಧ ಕಛೇರಿಗಳಿಗೆ ಉಲ್ಲೇಖಿಸಿ ರವಾನಿಸುವುದನ್ನು ತಪ್ಪಿಸುವ ಬಗ್ಗೆ.

---

ಇತ್ತೀಚಿನ ದಿನಗಳಲ್ಲಿ ರಾಜ್ಯಾದ್ಯಂತ ಕವಿಪ್ರನಿನಿ ಮತ್ತು ವಿದ್ಯುತ್ ಸರಬರಾಜು ಕಂಪನಿಗಳ ವಿವಿಧ ಕಛೇರಿಗಳು ದಿನನಿತ್ಯದಲ್ಲಿ ವಿವಿಧ ವಿಷಯಗಳಿಗೆ ಸಂಬಂಧಿಸಿದಂತೆ ಜಾರಿಗೊಳಸುವ ಹಲವು ಅಧಿಕೃತ ಜ್ಞಾಪನಾ ಪತ್ರಗಳು, ಸುತ್ತೋಲೆಗಳು, ಆದೇಶಗಳು, ಅಧಿಕಾರಿಗಳ ಹಸ್ತಾಂತರ ವರದಿಗಳ ಹಾಗೂ ಇತರೆ ಕಛೇರಿಗಳೊಂದಿಗೆ ವ್ಯವಹರಿಸುವ ಪತ್ರಗಳ ಪ್ರತಿಗಳನ್ನು ಅಗತ್ಯತೆಯಿಲ್ಲದಿದ್ದರೂ ಸಹ, ಕವಿಪ್ರನಿನಿಯ ನಿಗಮ ಕಾರ್ಯಾಲಯವು ಸೇರಿದಂತೆ ಹಲವಾರು ಕಛೇರಿಗಳಿಗೆ ಮಾಹಿತಿಗಾಗಿ ಎಂದು ಉಲ್ಲೇಖಿಸಿ ಕಳುಹಿಸುತ್ತಿರುವುದನ್ನು ಗಮನಿಸಲಾಗಿದೆ. ಈ ರೀತಿಯಲ್ಲಿ ಪ್ರತಿಗಳನ್ನು ರವಾನಿಸಲು ಸಂಬಂಧಿಸಿದ ಕಛೇರಿಗಳು ಹೆಚ್ಚುವರಿ ಅಂಚೆ ವೆಚ್ಚ ಹಾಗೂ ಲೇಖನ ಸಾಮಗ್ರಿ ವೆಚ್ಚವನ್ನು ಭರಿಸುವುದರ ಜೊತೆಗೆ, ಸದರಿ ಪ್ರತಿಗಳನ್ನು ಸ್ವೀಕರಿಸುವ ಸಂಬಂಧಿಸಿದ ಕಛೇರಿಗಳ ಸ್ವೀಕೃತಿ ವಿಭಾಗಗಳ ಸಿಬ್ಬಂದಿ ಹಾಗೂ ಸ್ವೀಕರಿಸಿದ ಕಛೇರಿಯ ಎಲ್ಲಾ ಅಧಿಕಾರಿಗಳ ಅತ್ಯಮೂಲ್ಯ ಸಮಯವು ವ್ಯರ್ಥವಾಗುತ್ತಿದೆ. ಅನಾವಶ್ಯಕವಾಗಿ ರವಾನಿಸಿದ ಇಂತಹ ಪ್ರತಿಗಳ ವಿಷಯದಲ್ಲಿ ಸಂಬಂಧಿಸಿದ ಕಛೇರಿಗಳಿಂದ ಸಹಾ ಯಾವುದೇ ಕ್ರಮಗಳನ್ನು ತೆಗೆದುಕೊಳ್ಳುವ ಅವಶ್ಯಕತೆಯಿರುವುದಿಲ್ಲ.

ಮೇಲಿನ ಅಂಶಗಳ ಹಿನ್ನೆಲೆಯಲ್ಲಿ, ಕವಿಪ್ರನಿನಿ ಮತ್ತು ವಿದ್ಯುತ್ ಸರಬರಾಜು ಕಂಪನಿಗಳ ಯಾವುದಾದರೂ ಉನ್ನತ ಕಛೇರಿಗಳು ನಿರ್ದಿಷ್ಟವಾಗಿ ಯಾವುದಾದರೂ ಪ್ರತಿಗಳನ್ನು ಮಾಹಿತಿಗಾಗಿ

DD(Admn)
17/09/18

A6
17/09/18

ತಪ್ಪದೇ ಕಳುಹಿಸಲು ಸೂಚಿಸಿದ್ದಲ್ಲಿ ಮಾತ್ರ, ಅಂತಹ ಪ್ರತಿಗಳನ್ನು ಉಲ್ಲೇಖಿಸಿ ಸೂಚಿಸಿದ ಕಛೇರಿಗಳಿಗೆ ರವಾನಿಸುವುದು. ಇಲ್ಲದಿದ್ದ ಪಕ್ಷದಲ್ಲಿ, ಕವಿಪ್ರನಿನಿಯ ಮತ್ತು ವಿವಿಧ ವಿದ್ಯುತ್ ಸರಬರಾಜು ಕಂಪನಿಗಳ ವ್ಯಾಪ್ತಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಸಂಬಂಧಿಸಿದ ಅಧಿಕಾರಿಗಳು ತಮ್ಮ ಕಛೇರಿಯಿಂದ ದಿನನಿತ್ಯದಲ್ಲಿ ಜಾರಿಗೊಳಿಸುವ ಅಧಿಕೃತ ಜ್ಞಾಪನಾ ಪತ್ರಗಳ, ಸುತ್ತೋಲೆಗಳ, ಆದೇಶಗಳ, ಅಧಿಕಾರಿಗಳ ಹಸ್ತಾಂತರ ವರದಿಗಳ ಹಾಗೂ ಬೇರೆ ಕಛೇರಿಗಳೊಂದಿಗೆ ವ್ಯವಹರಿಸುವ ಪತ್ರಗಳ ಪ್ರತಿಗಳು ಯಾವ ಕಛೇರಿಗಳಿಗೆ ಮತ್ತು ಯಾವ ಕಾರಣಗಳಿಗಾಗಿ ಅವಶ್ಯತೆಯಿದೆ ಎಂಬುದನ್ನು ಪರಿಶೀಲಿಸಿ ಖಚಿತಪಡಿಸಿಕೊಂಡ ನಂತರವೇ, ಅಗತ್ಯ ಕಂಡುಬರುವ ಕಛೇರಿಗಳಿಗೆ ಮಾತ್ರ ಸದರಿ ಪ್ರತಿಗಳನ್ನು ಉಲ್ಲೇಖಿಸಿ ರವಾನಿಸಲು ಸೂಚಿಸಿದೆ.

ನಿರ್ದೇಶಕರು (ಆಡಳಿತ ಮತ್ತು ಮಾ.ಸಂ.)
ಕವಿಪ್ರನಿನಿ.

# ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿ ನಿಯಮಿತ

[ಕರ್ನಾಟಕ ಸರ್ಕಾರದ ಸಂಪೂರ್ಣ ಸಾಮ್ಯಕ್ಕೆ ಒಳಪಟ್ಟಿದೆ]

ಮೆಮೋ: ಕ್ರಮ ಸಂಖ್ಯೆ: ಹೆಚ್.ಸಿ.ಓ.-07/ಹೆಚ್ 576/2017-18

ಹುಬ್ಬಳ್ಳಿ, ದಿನಾಂಕ: 18 SEP 2018

ಪ್ರತಿ: <u>ಮಾಹಿತಿಗಾಗಿ ಹಾಗೂ ಈ ಕುರಿತಂತೆ ಸೂಕ್ತ ಕ್ರಮಕ್ಕಾಗಿ, ಸದರಿ ಸುತ್ತೋಲೆಯಲ್ಲಿ ಪತ್ರಗಳ/ ಆದೇಶಗಳ ಪ್ರತಿಗಳನ್ನು ಅನಗತ್ಯವಾಗಿ ಕವಿಪ್ರನಿನಿ/ ಹು.ವಿ.ಸ.ಕಂ.ನಿ., ಗಳ ನಿಗಮ / ಕಂಪನಿ ಕಛೇರಿಗೆ ಉಲ್ಲೇಖಿಸಿ ರವಾನಿಸುವುದನ್ನು ತಪ್ಪಿಸಲು ಸೂಕ್ತ ಕ್ರಮ ಕೈಗೊಳ್ಳಲು ಕೋರಿದೆ.</u>

1. ಮುಖ್ಯ ಇಂಜಿನೀಯರ್ (ವಿದ್ಯುತ್), ಹುಬ್ಬಳ್ಳಿ/ಬೆಳಗಾವಿ ವಲಯ, ಹು.ವಿ.ಸ.ಕಂ.ನಿ., ಹುಬ್ಬಳ್ಳಿ/ ಬೆಳಗಾವಿ.
2. ಅಧೀಕ್ಷಕ ಇಂಜಿನೀಯರ್ (ವಿದ್ಯುತ್), (ಮಾ.ತಂ ಮತ್ತು ಮಾ. ತ), ಕಂಪನಿ ಕಾರ್ಯಾಲಯ ಹು.ವಿ.ಸ.ಕಂ.ನಿ., ಹುಬ್ಬಳ್ಳಿ ಮಾಹಿತಿಗಾಗಿ ಹಾಗೂ ಹು.ವಿ.ಸ.ಕಂ.ನಿ., ಅಂತರ್ ಜಾಲದಲ್ಲಿ ಪ್ರಕಟಿಸಲು ಸೂಕ್ತ ಕ್ರಮಗಳನ್ನು ಕೈಗೊಳ್ಳಲು ಕೋರಿದೆ.
3. ಅಧೀಕ್ಷಕ ಇಂಜಿನೀಯರ್ (ವಿದ್ಯುತ್), ಕಾರ್ಯ ಮತ್ತು ಪಾಲನೆ ವೃತ್ತ, ಹುವಿಸಕಂನ., ಹುಬ್ಬಳ್ಳಿ/ ಶಿರಸಿ/ ಹಾವೇರಿ/ ಬೆಳಗಾವಿ/ ವಿಜಯಪುರ/ ಬಾಗಲಕೋಟ/ಚಿಕ್ಕೊಡಿ.
4. ಕಾರ್ಯನಿರ್ವಾಹಕ ಇಂಜಿನೀಯರ್ (ವಿದ್ಯುತ್ರ), ಕಾರ್ಯ ಮತ್ತು ಪಾಲನೆ ವಿಭಾಗ ಹು.ವಿ.ಸ.ಕಂ.ನಿ., ಹುಬ್ಬಳ್ಳಿ(ನಗರ/ಗ್ರಾಮೀಣ)/ ಧಾರವಾಡ (ನಗರ/ಗ್ರಾಮೀಣ)/ಗದಗ /ರೋಣ /ಶಿರಸಿ/ ಕಾರವಾರ /ದಾಂಡೇಲಿ/ ಹೊನ್ನಾವರ/ ಹಾವೇರಿ /ರಾಣೇಬೆನ್ನೂರ/ ಬೆಳಗಾವಿ (ನಗರ/ಗ್ರಾಮೀಣ)/ ಬೈಲಹೊಂಗಲ/ ಘಟಪ್ರಭಾ/ ರಾಮದುರ್ಗ / ವಿಜಯಪುರ / ಇಂಡಿ ಬಸವನ ಬಾಗೇವಾಡಿ/ ಜಮಖಂಡಿ / ಮುಧೋಳ/ ಬಾಗಲಕೋಟೆ/ ಚಿಕ್ಕೋಡಿ/ ಅಥಣಿ/ ರಾಯಬಾಗ.
5. ಎಲ್ಲಾ ಸಹಾಯಕ ಕಾರ್ಯನಿರ್ವಾಹಕ ಇಂಜಿನೀಯರ್ (ವಿದ್ಯುತ್), ಕಾರ್ಯ ಮತ್ತು ಪಾಲನೆ ಉಪ-ವಿಭಾಗ, ಹು.ವಿ.ಸ.ಕಂ.ನಿ.,
6. ಎಲ್ಲಾ ಶಾಖಾಧಿಕಾರಿಗಳು, ಕಾರ್ಯ ಮತ್ತು ಪಾಲನೆ ಶಾಖೆ,, ಹು.ವಿ.ಸ.ಕಂ.ನಿ.,
7. ಹಿರಿಯ ಆಪ್ತ ಕಾರ್ಯದರ್ಶಿಗಳು (ವ್ಯ.ನಿ./ನಿ(ತಾಂ)), ಕಂಪನಿ ಕಾರ್ಯಾಲಯ, ಹು.ವಿ.ಸ.ಕಂ.ನಿ., ಹುಬ್ಬಳ್ಳಿ ಮಾಹಿತಿಗಾಗಿ ಹಾಗೂ ಮಾನ್ಯರ ಅವಗಾಹನೆಗೆ ತರಲು ಕೋರಿದೆ.
8. ಆಪ್ತ ಕಾರ್ಯದರ್ಶಿಗಳು (ಮು.ಆ.ಅ), ಕಂಪನಿ ಕಾರ್ಯಾಲಯ, ಹುಬ್ಬಳ್ಳಿ ಮಾಹಿತಿಗಾಗಿ ಹಾಗೂ ಮಾನ್ಯರ ಅವಗಾಹನೆಗೆ ತರಲು ಕೋರಿದೆ.
9. ಮುಖ್ಯ ಗುಮಾಸ್ತ, ಕಂಪನಿ ಕಾರ್ಯಾಲಯ ಹು.ವಿ.ಸ.ಕಂ.ನಿ., ಹುಬ್ಬಳ್ಳಿ ಮಾಹಿತಿಗಾಗಿ ಹಾಗೂ ಹು.ವಿ.ಸ.ಕಂ.ನಿ., ಕಂಪನಿ ಕಛೇರಿಯಲ್ಲಿ ಸೂಕ್ತ ಕ್ರಮಕ್ಕಾಗಿ.
10. ಕಛೇರಿ ಪ್ರತಿ/ ಮಹಾ ಕಡತ.

ಪ್ರಧಾನ ವ್ಯವಸ್ಥಾಪಕರು
(ಆಡಳಿತ ಮತ್ತು ಮಾ.ಸಂ.ಅ)
(ಹೆಚ್ಚುವರಿ ಪ್ರಭಾರ)